## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ದುರ್ಬಲ

ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಸ್ವಲ್ಪ ದುರ್ಬಲ ಸ್ಥಿತಿಯಲ್ಲಿ ಮುಂದುವರಿದಿದೆ. ರಫ್ತು ಹೆಚ್ಚಳವಿದ್ದರೂ, ಇತರ ಪ್ರತಿಸ್ಪರ್ಧಿ ಖಾದ್ಯತೈಲ ದರಗಳು ದುರ್ಬಲವಿರುವುದರಿಂದ ಹಾಗೂ ದಲಿಯನ್ ಮಾರುಕಟ್ಟೆಯಲ್ಲಿ ಪಾಮೆಣ್ಣೆ ದರ ದುರ್ಬಲವಿರುವುದರಿಂದ ಮಲೇಶಿಯನ್ ಪಾಮೆಣ್ಣೆ ದರ ದುರ್ಬಲವಿದೆ.

## ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಹೊಸ ಬೆಳೆಯ ಜೋಳ ಆವಕ ಸಾಧ್ಯತೆ.

ಜೋಳ ದರ ಪ್ರಮುಖ ದೇಶೀ ಮಾರುಕಟ್ಟೆಗಳಲ್ಲಿ ಸ್ಥಿರವಿದ್ದು, ಹೊಸ ಬೆಳೆಯ ಆವಕ ಮಾರ್ಚ್ ತಿಂಗಳಲ್ಲಿ ಅಥವಾ ಏಪ್ರಿಲ್ ಪ್ರಥಮ ವಾರದಲ್ಲಿ ಆರಂಭವಾಗಬಹುದೆನ್ನಲಾಗಿದೆ. ಬೆಳೆಯ ಇಳುವರಿ ಉತ್ತಮವಿದೆಯೆನ್ನಲಾಗಿದೆ. ಹೊಸ ಬೆಳೆಯ ಆವಕ ಆರಂಭವಾದಾಗ ದರ ಇಳಿಕೆಯ ಸಾಧ್ಯತೆಗಳಿವೆಯೆನ್ನಲಾಗಿದೆ.

## ಗುಜರಾತ್‌ನಲ್ಲಿ ನಾಫೆಡ್‌ನಿಂದ ನೀರುಳ್ಳಿ

ಮಹಾರಾಷ್ಟ್ರದಲ್ಲಿ ನೀರುಳ್ಳಿ ಖರೀದಿ ಆರಂಭಿಸಿದ ನಂತರ ನಾಫೆಡ್ ( NAFED ) ಈಗ ಗುಜರಾತ್‌ನಲ್ಲಿ ನೀರುಳ್ಳಿ ಖರೀದಿಗೆ ಆರಂಭಿಸಿದೆಯೆನ್ನಲಾಗಿದೆ. ದರ ಕುಸಿತ ತಡೆಯಲು ನಾಫೆಡ್ ನೀರುಳ್ಳಿ ಖರೀದಿಸುತ್ತಿದೆಯೆನ್ನಲಾಗಿದೆ.

## ಪಶ್ಚಿಮಬಂಗಾಳದಲ್ಲಿ ಬಟಾಟೆ ಬೆಳೆ ಇಳುವರಿ ಹೆಚ್ಚಳ

ಪ್ರಮುಖ ಬಟಾಟೆ ಬೆಳೆಯುವ ರಾಜ್ಯ ಪಶ್ಚಿಮಬಂಗಾಳದಲ್ಲಿ ಬಟಾಟೆ ಬೆಳೆಯ ಇಳುವರಿ ಹೆಚ್ಚಳದಿಂದ ಉತ್ಪಾದನೆ ಹೆಚ್ಚಳವಿದೆಯೆನ್ನಲಾಗಿದೆ. ಉತ್ಪಾದನೆ ಹೆಚ್ಚಳದ ವರದಿಗಳಿಂದ ಉತ್ತರಪ್ರದೇಶದಲ್ಲಿ ಬಟಾಟೆ ದರ ಇಳಿಕೆಯಾಗಿದೆಯೆನ್ನಲಾಗಿದೆ. ಪ್ರಮುಖ ಬೆಳೆಯುವ ಪ್ರದೇಶಗಳಲ್ಲಿ ಉತ್ಪಾದನೆ ಹೆಚ್ಚಳವಿರುದರಿಂದ ದೇಶದಾದ್ಯಂತ ಬಟಾಟೆ ದರ ಇಳಿಕೆಯಾಗಿದೆ.